**CC 182/2021**
**PW-1**

ದಿಃ **24-06-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಆರೋಪಿ ಪರ ಶ್ರೀ ಎಸ್.ಎಸ್.ಜಿ. ವಕೀಲರಿಂದ**

ನಿಮ್ಮ ಬ್ಯಾಂಕ್ ಖಾತೆಯಲ್ಲಿ ನಿಮ್ಮ ಹೆಸರನ್ನು ಏನೆಂದು ನಮೂದಿಸಿದೆ ಎಂದರೆ ಸಾಕ್ಷಿ ಜಯಲಕ್ಷ್ಮಮ್ಮ ಎಂದು ಹೇಳುತ್ತಾರೆ. ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿದ ಎಲ್ಲ ದಾಖಲಾತಿಗಳಲ್ಲೂ ಜಯಲಕ್ಷ್ಮಮ್ಮ ಎಂದು ಸಹಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಜಯಲಕ್ಷ್ಮಿ ಎಂದೇ ಸಹಿ ಮಾಡುತ್ತೇನೆ ಎಂದು ಹೇಳುತ್ತಾರೆ. ನಿಪಿ-1 ರಲ್ಲಿ ಜಯಲಕ್ಷ್ಮೀ ಎಂದೇ ಸಹಿ ಮಾಡಿರುತ್ತೇನೆ. ನಿಮ್ಮ ಪಿರ್ಯಾದಿಯಲ್ಲಿ ಆರೋಪಿಗೆ ಹಣವನ್ನು ಡಿಡಿ ಮೂಲಕ ಕೊಟ್ಟಿದ್ದೀರಾ ಅಥವಾ ನಗದು ರೂಪದಲ್ಲಿ ಕೊಟ್ಟಿದ್ದೀರಾ ಎಂದು ಬರೆಸಿಲ್ಲ ಎಂದರೆ ಸರಿ.

ಸಾಮಾನ್ಯವಾಗಿ ಬೇರೆಯವರೊಂದಿಗೆ ವ್ಯವಹಾರ ಮಾಡಿದಾಗ ಯಥವತ್ತಾಗಿ ಬರೆಸಲು ಅಭ್ಯಾಸ ನಿಮಗೆ ಇದೆ ಎಂದರೆ ಸಾಕ್ಷಿ ಬೇರೆಯವರೊಂದಿಗೆ ಯಾವುದೇ ವ್ಯವಹಾರ ಮಾಡಿಲ್ಲ ಹಾಗಾಗಿ ನನಗೆ ಅನುಭವಕ್ಕೆ ಬಂದಿಲ್ಲ ಎಂದು ಹೇಳುತ್ತಾರೆ. 4,75,000/- ರೂ. ಗಳ ಹಣದ ಮೂಲ ಬಗ್ಗೆ ನಿಮ್ಮ ಮುಖ್ಯ ವಿಚಾರಣೆಯಲ್ಲಾಗಲೀ, ಪಿರ್ಯಾದಿನಲ್ಲಾಗಲೀ ಅಥವಾ ತಿಳುವಳಿಕೆ ಪತ್ರದಲ್ಲಾಗಲೀ ಬರೆಸಿಲ್ಲ ಎಂದರೆ ಸರಿ. ನಿಮ್ಮ ಪಿರ್ಯಾದಿನಲ್ಲಾಗಲೀ ಅಥವಾ ತಿಳುವಳಿಕೆ ಪತ್ರ(ನಿಪಿ-4)ದಲ್ಲಾಗಲೀ ನಿಮ್ಮ ಉದ್ದೋಗ್ಯವನ್ನು ಬರೆಸಿಲ್ಲ ಎಂದರೆ ಸರಿ. ನಿಪಿ-4 ರನ್ವಯ ನಿಮ್ಮ ಪಿರ್ಯಾದಿನಲ್ಲಿ ನಮೂದಿಸಿಲ್ಲ ಎಂದರೆ ಸರಿ.

ನೀವು ಆರೋಪಿಗೆ 4,75,000/- ರೂ. ಗಳ ಹಣ ಕೊಟ್ಟಿದ್ದನ್ನು ನೋಡಿದವರು ಯಾರಾದರೂ ಇದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನೀವು ಸರ್ಕಾರಿ ನೌಕರರು ಅಲ್ಲ, ಖಾಸಗಿ ಉದ್ಯೋಗಿ ಅಲ್ಲ ಎಂದರೆ ಸರಿ. ಪಿರ್ಯಾದಿನಲ್ಲಿ ಬರೆದಿರುವ ವಿಚಾರ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿದ್ದೇನೆ. ಆರೋಪಿ ದಿಃ01.08.2020 ರಂದು ಹಣ ಪಡೆದಿರುತ್ತಾನೆಂದು ಪಿರ್ಯಾದಿನಲ್ಲಿ ಬರೆಸಿರುತ್ತೇನೆ. ಪಿರ್ಯಾದಿನಲ್ಲಿ ಹಣ

ಮರುಪಾವತಿಸಲು 2 ತಿಂಗಳ ಕಾಲಾವಕಾಶ ಕೇಳಿದ್ದ ಎಂದು ಬರೆಸಿರುತ್ತೀರಾ ಎಂದರೆ ಸರಿ. 2 ತಿಂಗಳ ನಂತರ ಆರೋಪಿಯನ್ನು ನೀವು ಭೇಟಿ ಮಾಡಿದ್ದೀರಾ ಎಂದರೆ ಸಾಕ್ಷಿ ಅವರ ಮನೆಗೆ ಹೋಗಿದ್ದೆ ಎಂದು ಹೇಳುತ್ತಾರೆ. ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ಆರೋಪಿಯನ್ನು ಭೇಟಿ ಮಾಡಿದ್ದೀರಾ ಎಂದರೆ ಸಾಕ್ಷಿ ನೆನಪಿಲ್ಲ ಎಂದು ಹೇಳುತ್ತಾರೆ. 2 ತಿಂಗಳು ಆದ ಮೇಲೆ ಎಷ್ಟು ದಿನಗಳಾದ ನಂತರ ಆರೋಪಿಯನ್ನು ಹಣ ಪಾವತಿಸುವಂತೆ ಕೇಳಲು ಹೋಗಿದ್ದೀರಿ ಎಂದರೆ ಸಾಕ್ಷಿ 1 ತಿಂಗಳ ಒಳಗೆ ಹೋಗಿದ್ದೆ ಎಂದು ಹೇಳುತ್ತಾರೆ.

ಆರೋಪಿ ನಿಮಗೆ ಚೆಕ್ ಕೊಟ್ಟ ದಿನಾಂಕ ಯಾವುದು ಎಂದರೆ ಸಾಕ್ಷಿ 01.10.2020 ಎಂದು ಹೇಳುತ್ತಾರೆ. ನಿಮ್ಮ ಪಿರ್ಯಾದಿನಲ್ಲಿ ಆರೋಪಿ ಮುಂದಿನ ದಿನಾಂಕವನ್ನು ನಮೂದು ಮಾಡಿ ನಿಮಗೆ ಚೆಕ್ ಕೊಟ್ಟ ಎಂದು ನಮೂದಿಸಿದ್ದೀರಾ ಎಂದರೆ ಸರಿ. ಹಾಗಾದರೆ ಆರೋಪಿ ನಮೂದು ಮಾಡಿ ಕೊಟ್ಟ ದಿನಾಂಕ, ತಿಂಗಳು ಮತ್ತು ವರ್ಷ ಯಾವುದು ಎಂದರೆ ಸಾಕ್ಷಿ ಸರಿಯಾಗಿ ನೆನಪಿಲ್ಲ ಎಂದು ಹೇಳುತ್ತಾರೆ. ನಿಪಿ-1 ನ್ನು ಹಣ ಸಂದಾವಣೆಗೆ ಹಾಕಿದ ದಿನಾಂಕ ಯಾವುದು ಎಂದರೆ ಸಾಕ್ಷಿ ಆರೋಪಿ ಕೊಟ್ಟ 2-3 ದಿನಗಳಲ್ಲೇ ಹಾಕಿದ್ದೇವು ಎಂದು ಹೇಳುತ್ತಾರೆ.

ನಿಮ್ಮ ಪಿರ್ಯಾದಿನಲ್ಲಿ 2 ತಿಂಗಳ ನಂತರ ಆರೋಪಿಯನ್ನು ಕೇಳಿದ್ದು, ನಂತರ ಆರೋಪಿ ಚೆಕ್ ನ್ನು ಬರೆದುಕೊಟ್ಟ ಎಂದು ಬರೆಸಿದ್ದೀರಾ ಎಂದರೆ ಸಾಕ್ಷಿ ಬರೆಸಿಲ್ಲ ಎಂದು ಹೇಳುತ್ತಾರೆ. ನಿಮ್ಮ ಪಿರ್ಯಾದಿನಲ್ಲಿ 2 ತಿಂಗಳ ನಂತರ ಆರೋಪಿಯನ್ನು ಕೇಳಿದ್ದು, ನಂತರ ಆರೋಪಿ ಚೆಕ್ ನ್ನು ಬರೆದುಕೊಟ್ಟ ಎಂದು ಬರೆದಿದ್ದರೇ ಅದು ಸುಳ್ಳಾ ಎಂದರೆ ಸಾಕ್ಷಿ ಬರೆಸಿದ್ದೇನೆ, ಅದು ನಿಜ ಎಂದು ಹೇಳುತ್ತಾರೆ.

ನಿಮ್ಮ ಯಜಮಾನರು ಸರ್ಕಾರ ಸಂಘದಿಂದ ಅಮಾನತ್ತುಪಡಿಸಲಾದ ನೌಕರ ಎಂದರೆ ಸರಿಯಲ್ಲ. ನಿಮ್ಮ ಯಜಮಾನರು ನಿವೃತ್ತಿ ಹೊಂದಿದ್ದಾರಾ ಎಂದರೆ ಸಾಕ್ಷಿ ರಾಜಿನಾಮೆ ಕೊಟ್ಟಿದ್ದರು ಎಂದು ಹೇಳುತ್ತಾರೆ. ನಿಮ್ಮ ಯಜಮಾನರ ವಿರುದ್ಧ 10 ಲಕ್ಷಕ್ಕಿಂತ ಹೆಚ್ಚು ಹಣ ದುರುಪಯೋಗಪಡಿಸಿಕೊಂಡಿದ್ದಾರೆಂದು ಆರೋಪಣೆ ಮಾಡಿ ಅಮಾನತ್ತುಪಡಿಸಲಾಗಿದೆ ಎಂದರೆ ಸುಳ್ಳು.

ನೀವು ಯಾವುದೇ ಹಣಕಾಸಿನ ವ್ಯವಹಾರ ಮಾಡಲು ನಿಮ್ಮ ಯಜಮಾನರು ಅನುಮತಿ ಇಲ್ಲದೇ ಮಾಡುವ ಅಭ್ಯಾಸ ಇಲ್ಲ ಎಂದರೆ ಸರಿ. ಆರೋಪಿಯೊಂದಿಗೆ ಹಣದ ವ್ಯವಹಾರ ಮಾಡಿದ ವಿಚಾರ ನಿಮ್ಮ ಯಜಮಾನರಿಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತು  ಎಂದು ಹೇಳುತ್ತಾರೆ. ನಿಮ್ಮ ಯಜಮಾನರನ್ನು ಪಿರ್ಯಾದಿನಲ್ಲಿ ಸಾಕ್ಷ್ಯ ಮಾಡಿಸಲು ನಿಮ್ಮದೇನು ತೊಂದರೆ ಇಲ್ಲ ಎಂದರೆ ಸರಿ.

2020 ರಲ್ಲಿ ಸಮಾಜ ಕೋವಿಡ್ ನಿಂದ ಮುಕ್ತವಾಗಿತ್ತು ಎಂದರೆ ಸರಿ. ನಿಮ್ಮ ಯಜಮಾನರ ವಿರುದ್ಧ ಹಣಕಾಸಿನ ದುರುಪಯೋಗ ಇದ್ದುದ್ದರಿಂದ, ಅವರನ್ನು ಕೆಲಸದಿಂದ ಅಮಾನತ್ತುಪಡಿಸಿದರಿಂದ ನಿಮಗೆ ಕುಟುಂಬದಲ್ಲಿ ಆರ್ಥಿಕ ಮುಗ್ಗಟ್ಟು ಉಂಟಾಗಿತ್ತು ಎಂದರೆ ಸಾಕ್ಷಿ ಆರ್ಥಿಕ ಸಮಸ್ಯೆ ಅಷ್ಟೊಂದು ಇರಲಿಲ್ಲ ಎಂದು ಹೇಳುತ್ತಾರೆ. ನಿಮ್ಮ ಯಜಮಾನರಿಗೆ ಶೋಕಾಸ್ ನೋಟೀಸ್ ಕೊಟ್ಟು ಸೊಸೈಟಿಗೆ ಹಣ ಪಾವತಿಸುವಂತೆ ಸೂಚಿಸಲಾಗಿತ್ತು ಎಂದರೆ ಸರಿ. ನಿಮ್ಮ ಬಳಿ ಸಾಕಷ್ಟು ಹಣ ಇಲ್ಲದೇ ಇರುವುದರಿಂದ ನಿಗದಿತ ಸಮಯದಲ್ಲಿ ಹಣ ಪಾವತಿಸಿಲ್ಲ ಎಂದರೆ ಸಾಕ್ಷಿ ಕಟ್ಟಿದ್ದೇವೆ  ಎಂದು ಹೇಳುತ್ತಾರೆ.

2020 ಆಗಸ್ಟ್ ರಿಂದ ನಿಮ್ಮ ಕುಟುಂಬದ ಆರ್ಥಿಕ ಸ್ಥಿತಿ ಚೆನ್ನಾಗಿತ್ತು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಮ್ಮ ಯಜಮಾನರು ಚೆಕ್ಕುಂದ ಸೇವಾ ಸಹಕಾರ ಸಂಘದಲ್ಲಿ ಕಾರ್ಯದರ್ಶಿಯಾಗಿದ್ದಾಗ, ನ್ಯಾಯಾಲಯದ ಮುಂದಿರುವ ಆರೋಪಿ ನಿರ್ದೇಶಕರಾಗಿದ್ದರು ಎಂದರೆ ಸರಿ. ತದನಂತರ ದಿನಗಳಲ್ಲಿ ಆರೋಪಿ ಸದರಿ ಸಂಸ್ಥೆಯ ಅಧ್ಯಕ್ಷರಾದರು ಎಂದರೆ ಸಾಕ್ಷಿ ಆಗಿಲ್ಲ  ಎಂದು ಹೇಳುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿ ಸಹಹಾರ ಸಂಘ ಇಲಾಖೆಗೆ ನಿಮ್ಮ ಯಜಮಾನರ ವಿರುದ್ಧ ಅರ್ಜಿ ನೀಡಿದ್ದರಿಂದ, ಅವರ ವಿರುದ್ಧ ವಿಚಾರಣೆ ನಡೆಯಿತು ಎಂದರೆ  ಸರಿಯಲ್ಲ. ಸದರಿ ಅರ್ಜಿಯನ್ನು ಯಾರು ಕೊಟ್ಟ ಮೇರೆಗೆ ವಿಚಾರಣೆ ನಡೆಯಿತು ಎಂದರೆ ಸಾಕ್ಷಿ  ಮಾಜಿ ಅಧ್ಯಕ್ಷರು ಕೊಟ್ಟಿರಬಹುದು  ಎಂದು ಹೇಳುತ್ತಾರೆ.

ನ್ಯಾಯಾಲಯದ ಮುಂದಿರುವ ಆರೋಪಿಯೇ ನಿಮ್ಮ ಯಜಮಾನರ ವಿರುದ್ಧ ಅರ್ಜಿಗೆ ಕೊಟ್ಟ, ನಿಮ್ಮ ಯಜಮಾನರಿಗೆ ಆರೋಪಿ ಅರ್ಜಿ ಕೊಟ್ಟರು ಎಂಬ ಕೋಪ ಆರೋಪಿಯ

ಮೇಲೆ ಇತ್ತು ಎಂದರೆ ಸುಳ್ಳು. ಆರೋಪಿಯ ಸಂಸ್ಥೆಯ ನಿರ್ದೇಶಕರಾಗಿದ್ದಾಗ ಸಂಸ್ಥೆಯ ಕಚೇರಿಯಲ್ಲಿ ಸಹಿ ಮಾಡಿ, ತನ್ನ ಡ್ರಾ ನಲ್ಲಿ ಇಟ್ಟಿದ್ದ ಚೆಕ್ ನ್ನು ತಂದು ನಿಮ್ಮ ಮೂಲಕ ಚೆಕ್ ಬರೆಸಿ ಪಿರ್ಯಾದು ಸಲ್ಲಿಸಿ, ದುರುಪಯೋಗಪಡಿಸಿಕೊಂಡಿರುತ್ತಾರೆಂದರೆ ಸುಳ್ಳು. ನ್ಯಾಯಾಲಯದ ಮುಂದಿರುವ ಆರೋಪಿ ಚಿಕ್ಲುಂದ ಸೇವಾ ಸಹಕಾರ ಸಂಘದಲ್ಲಿ ಬೆಳೆ ಸಾಲ ಪಡೆದಿದ್ದರು ಎಂದರೆ ಸಾಕ್ಷಿ ಪಡೆದಿದ್ದರೆನೋ ಎಂದು ಹೇಳುತ್ತಾರೆ. ಸದರಿ ಸಾಲದ ತಿರುವಳಿಗಾಗಿ ಬ್ಯಾಂಕಿಗೆ ಕೊಡಲು ಆರೋಪಿ ಸಹಿ ಮಾಡಿದ ಚೆಕ್ ನ್ನು ತೆಗೆದುಕೊಂಡು ಬಂದು ತಮ್ಮ ಕಚೇರಿಯ ಡ್ರಾ ನಲ್ಲಿ ಇಟ್ಟಿದ್ದರು ಎಂದರೆ ಸುಳ್ಳು. ಆರೋಪಿ 1,75,000/- ರೂ. ಗಳನ್ನು ಸಂಘದ ಸಾಲಕ್ಕೆ ಜಮಾ ಮಾಡಬೇಕಾಗಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.

ನಾನು ಎಸ್.ಎಸ್.ಎಲ್.ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಆರೋಪಿ 1,75,000/- ರೂ. ಗಳು ಎಂದು ಅಂಕಿಗಳಲ್ಲಿ ನಿಪಿ-1 ರಲ್ಲಿ ನಮೂದಿಸಿದ್ದರು ಎಂದರೆ ಸರಿಯಲ್ಲ. ನಿಪಿ-1 ರಲ್ಲಿ 1,75,000/- ಎಂಬುದನ್ನು 4,75,000/- ಎಂದು ತಿದ್ದಲಾಗಿದೆ ಎಂದರೆ ಸರಿಯಲ್ಲ. ನಿಮ್ಮ ವ್ಯವಹಾರಕ್ಕೆ ಸಿಮಿತವಾಗಿ 4,75,000/- ಬಾರಿ ಮೊತ್ತದ ಹಣ ಎಂದರೆ ಸರಿ.

ನೀವು ಯಾರಿಗಾದರೂ ಹಣ ಕೊಡಬೇಕಾದರೆ ಆತ ಚೆನ್ನಾಗಿ ಗೊತ್ತು ಎಂದು ಬರೆಸುವ ಅಭ್ಯಾಸ ನಿಮಗೆ ಇದೆ ಎಂದರೆ ಸಾಕ್ಷಿ ಇಲ್ಲ, ನಾನು ಯಾರಿಗೂ ಹಣ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಆರೋಪಿ ನನಗೆ ಗೊತ್ತು ಎಂದು ಏಲ್ಲಿಯೂ ಬರೆಸಿಲ್ಲ ಎಂದರೆ ಸರಿ. ಗೊತ್ತಿಲ್ಲದೇ ಇರುವವರೊಂದಿಗೆ ವ್ಯವಹಾರ ಮಾಡುವ ಅಭ್ಯಾಸ ನಿಮಗೆ ಇಲ್ಲ ಎಂದರೆ ಸಾಕ್ಷಿ ಇವರು ಗೊತ್ತು, ಗೊತ್ತು ಇದ್ದಿದ್ದರಿಂದ ವ್ಯವಹಾರ ಮಾಡಿದೆ ಎಂದು ಹೇಳುತ್ತಾರೆ. ನಿಪಿ-1 ನೀವು ಹಾಗೂ ನಿಮ್ಮ ಯಜಮಾನರು ಸೇರಿ, ಆರೋಪಿ ದೂರು ಕೊಟ್ಟ ಎಂಬ ವಿಚಾರವಾಗಿ 1,75,000/- ರೂ ಎಂಬುದನ್ನು 4,75,000/- ಎಂದು ತಿದ್ದಿ, ಬ್ಯಾಂಕಿಗೆ ನಗದೀಕರಣಕ್ಕೆ ಕೊಟ್ಟಿರುತ್ತೀರಾ ಎಂದರೆ ಸುಳ್ಳು.

ಆಗಸ್ಟ್ 2020 ರಲ್ಲಿ ಆರೋಪಿಗೆ ಹಣ ಕೊಡುವ ಆರ್ಥಿಕ ಸಾಮರ್ಥ್ಯ ನಿಮಗೆ ಇರಲಿಲ್ಲ ಎಂದರೆ ಸರಿಯಲ್ಲ. ಆಗಸ್ಟ್ 2020 ರಲ್ಲಿ ಆರೋಪಿಗೆ ಹಣ ಕೊಡುವ ಆರ್ಥಿಕ ಸಾಮರ್ಥ್ಯ

ಇತ್ತು ಎಂದು ತೋರಿಸಲು ದಾಖಲೆ ಇದೆಯೇ ಎಂದರೆ ಸಾಕ್ಷಿ ಇಟ್ಟುಕೊಂಡಿಲ್ಲ ಎಂದು ಹೇಳುತ್ತಾರೆ. ನಿಮ್ಮ ಬಳಿ ಹಣ ಇಲ್ಲದೇ ಇರುವುದರಿಂದ ಇಟ್ಟುಕೊಂಡಿಲ್ಲ ಎಂದರೆ ಸಾಕ್ಷಿ ಇದ್ದರೂ ಇಟ್ಟುಕೊಂಡಿಲ್ಲ ಎಂದು ಹೇಳುತ್ತಾರೆ.

ಆರೋಪಿಗೆ ಕೊಟ್ಟ ಎನ್ನಲಾದ ಹಣವನ್ನು ಎಲ್ಲಿ ಇಟ್ಟಿದ್ದೆ ಎಂದು ಪಿರ್ಯಾದಿನಲ್ಲಾಗಲೀ, ಮುಖ್ಯ ವಿಚಾರಣೆಯಲ್ಲಾಗಲೀ, ತಿಳುವಳಿಕೆ ಪತ್ರದಲ್ಲಾಗಲೀ ನಮೂದಿಸಿಲ್ಲ ಎಂದರೆ ಸರಿ. ನೀವು ಬ್ಯಾಂಕಿನ ವ್ಯವಸ್ಥಾಪಕರೊಂದಿಗೆ ಶಾಮಿಲಾಗಿ ನಿಪಿ-2 ನ್ನು ಸೃಷ್ಟಿಸಿಕೊಂಡಿದ್ದೀರಾ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಸಹಿ ಹೊಂದಾಣಿಕೆಯಾಗುವುದಿಲ್ಲ ಎಂದರೆ ಸರಿಯಲ್ಲ. ನೀವು ಬ್ಯಾಂಕಿನ ವ್ಯವಸ್ಥಾಪಕರನ್ನು ನಿಮ್ಮ ಪರ ಸಾಕ್ಷ್ಯ ಮಾಡಿಸಲು ತೊಂದರೆ ಇಲ್ಲ ಎಂದರೆ ಸರಿ. ಆರೋಪಿಯ ಮಕ್ಕಳು 2020 ನೇ ಸಾಲಿನಲ್ಲಿ ಸಾಪ್ಟವೇರ್ ಇಂಜಿನಿಯರ್ ಎಂದರೆ ಸರಿಯಲ್ಲ. ಆರೋಪಿ ಹಣಕಾಸಿನ ವ್ಯವಹಾರದಲ್ಲಿ ನಿಮಗಿಂತ ಉತ್ತಮ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.

ಆರೋಪಿ ಯಾವ ಕಾರಣಕ್ಕಾಗಿ ನಿಮ್ಮಲ್ಲಿ ಹಣದ ಅವಶ್ಯಕತೆ ಎಂದು ಬಂದು ಕೇಳಿದರು ಎಂದರೆ ಸಾಕ್ಷಿ ಏನು ಅವಶ್ಯಕತೆ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆರೋಪಿ ನಿಮ್ಮ ಬಳಿ ದಿಃ01.08.2020 ರಂದು 4,75,000/-ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ಸಾಲದ ಮರುಪಾವತಿಸುವಂತೆ ಕೇಳಲು ಆರೋಪಿಯ ಬಳಿ ಯಾರ್ಯಾರು ಹೋಗಿದ್ದೀರಿ ಎಂದರೆ ಸಾಕ್ಷಿ ನಾನು ಹಾಗೂ ನನ್ನ ಗಂಡ ಎಂದು ಹೇಳುತ್ತಾರೆ. ನಿಮ್ಮ ಯಜಮಾನರು ಹಣ ಮರುಪಾವತಿಸುವಂತೆ ಕೇಳಲು ಹೋದಾಗ ನನ್ನೊಂದಿಗೆ ಬಂದಿದ್ದರು ಎಲ್ಲಿಯೂ ಬರೆಸಿಲ್ಲ ಎಂದರೆ ಸರಿ. ನಿಮ್ಮ ಯಜಮಾನರಿಗೆ ಈಗಾಗಲೇ ಸಾಕಷ್ಟು ಸಮಸ್ಯೆಗಳು ಇದ್ದು, ಅವರ ಹೆಸರನ್ನು ತಂದು ಸೇರಿಸುವ ಉದ್ದೇಶ ಇರಲಿಲ್ಲ ಎಂದರೆ ಸಾಕ್ಷಿ ಹಾಗೆನಿಲ್ಲ ಎಂದು ಹೇಳುತ್ತಾರೆ. ನಿಪಿ-1 ರಲ್ಲಿ ಸಹಿಗೂ ಹಾಗೂ ಬರವಣಿಗೆಗೂ ವ್ಯತ್ಯಾಸ ಇದೆ ಎಂದರೆ ಸರಿ. ಸಹಿ ಇರುವ ಲೇಖನಿ ಹಾಗೂ ಬರವಣಿಗೆಯಾಗಿರುವ ಲೇಖನಿ ಬೇರೆ ಬೇರೆ ಎಂದರೆ ಸರಿ. ನಿಪಿ-1 ನ್ನು ಆರೋಪಿಯೇ ಬರೆದುಕೊಂಡ ಬಂದಿದ್ದ ಅಥವಾ ನನ್ನ ಸಮಕ್ಷಮ ಬರೆದ ಎಂದು ಪಿರ್ಯಾದಿನಲ್ಲಾಗಲೀ, ಮುಖ್ಯ ವಿಚಾರಣೆಯಲ್ಲಾಗಲೀ, ತಿಳುವಳಿಕೆ ಪತ್ರದಲ್ಲಾಗಲೀ

ಬರೆಸಿಲ್ಲ ಎಂದರೆ ಸರಿ. ನಿಪಿ-1 ನ್ನು ನನ್ನ ಸಮಕ್ಷಮ ಆರೋಪಿಯೇ ಬರೆದುಕೊಟ್ಟಿರುತ್ತಾರೆ. ನಿಪಿ-1 ರಲ್ಲಿರುವ ಬರವಣಿಸಗೆ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ.

ನಿಪಿ-6 ರಂತೆ ಆರೋಪಿಗೆ ಕಳುಹಿಸಿದ ತಿಳುವಳಿಕೆ ಪತ್ರ ವಾಪಸ್ಸು ಬಂದಿರುತ್ತದೆಂದರೆ ಸರಿ. ನಿಪಿ-6 ರಂತೆ ಆರೋಪಿಗೆ ತಿಳುವಳಿಕೆ ಪತ್ರ ಜಾರಿಯಾಗದೇ ಇದ್ದುದ್ದರಿಂದ ಮತ್ತೋಮ್ಮೆ ಜಾರಿಮಾಡಲು ಪ್ರಯತ್ನ ಪಟ್ಟಿರಾ ಎಂದರೆ ಸಾಕ್ಷಿ ಜಾರಿಪಡಿಸಿದ್ದೇವೆ ಎಂದು ಹೇಳುತ್ತಾರೆ. ನೀವು ಜಾರಿಯಾಗದೇ ಬಂದ ತಿಳುವಳಿಕೆ ಪತ್ರದ ನಂತರ ಮತ್ತೋಮ್ಮೆ ಕಳುಹಿಸಿದ ತಿಳುವಳಿಕೆ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. 2 ನೇ ಬಾರಿ ಕಳುಹಿಸಿದ ತಿಳುವಳಿಕೆ ಪತ್ರ ಆರೋಪಿಗೆ ಜಾರಿಯಾಗಿದೆಯೇ ಎಂದರೆ ಸಾಕ್ಷಿ ಆಗಿರಬೇಕು ಎಂದು ಹೇಳುತ್ತಾರೆ. ಜಾರಿಯಾಗಿರಬೇಕು ಎಂದು ಹೇಳುವ ತಿಳುವಳಿಕೆ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ನಿಮಗೇನು ತೊಂದರೆ ಇಲ್ಲ ಎಂದರೆ ಸಾಕ್ಷಿ ತೊಂದರೆ ಇಲ್ಲ ಎಂದು ಹೇಳುತ್ತಾರೆ.

ನಿಪಿ-4 ರಲ್ಲಿ ನಮೂದು ಇರುವ ಪ್ರೇಮಕುಮಾರ ರವರ ಮಗಳು ಜಯಲಕ್ಷ್ಮಮ್ಮ ಎಂದರೆ ನೀವು ಅಲ್ಲ ಎಂದರೆ ಸಾಕ್ಷಿ ಮಗಳು ಎಂದರೆ ಅಲ್ಲ, ಹೆಂಡತಿ ಎಂದರೆ ನಾನೇ ಎಂದು ಹೇಳುತ್ತಾರೆ. ನಿಪಿ-4 ರಲ್ಲಿ ಪ್ರೇಮಕುಮಾರ ರವರ ಹೆಂಡತಿ ಎಂದು ತಿಳುವಳಿಕೆ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿ ವ್ಯತ್ಯಾಸ ಆಗಿದೆ ಎಂದು ಹೇಳುತ್ತಾರೆ. ಆರೋಪಿಗೆ ಪ್ರಕರಣದಲ್ಲಿ ಕಡ್ಡಾಯವಾಗಿ ಕಳುಹಿಸಬೇಕಾದ ತಿಳುವಳಿಕೆ ಪತ್ರವನ್ನು ನೀವು ಕಳುಹಿಸಿಲ್ಲ ಎಂದರೆ ಸಾಕ್ಷಿ ಕೊಟ್ಟಿದೆ ಎಂದು ಹೇಳುತ್ತಾರೆ. ಪ್ರೇಮಕುಮಾರ ರವರ ಹೆಂಡತಿ ಜಯಲಕ್ಷ್ಮಮ್ಮ ಎಂದು ಹೇಳುವ ತಿಳುವಳಿಕೆ ಪತ್ರವನ್ನು ಹಾಜರುಪಡಿಸಲು ನಿಮಗೇನು ತೊಂದರೆ ಇಲ್ಲ ಎಂದರೆ ಸರಿ. ಪ್ರೇಮಕುಮಾರ ರವರ ಹೆಂಡತಿ ಜಯಲಕ್ಷ್ಮಮ್ಮ ಎಂದು ಹೇಳುವ ತಿಳುವಳಿಕೆ ಪತ್ರವನ್ನು ಕಳುಹಿಸಿದ ದಿನಾಂಕ, ತಿಂಗಳು, ವರ್ಷ ಯಾವುದೇಂದರೆ ಸಾಕ್ಷಿ ನೆನಪಿಲ್ಲ ಎಂದು ಹೇಳುತ್ತಾರೆ. ನೀವು ಕಳುಹಿಸಿಲ್ಲದೇ ಇರುವುದರಿಂದ ನಿಮಗೆ ನೆನಪಿಲ್ಲ ಎಂದರೆ ಸರಿಯಲ್ಲ. ನೀವು ಕಡ್ಡಾಯವಾಗಿ ಪ್ರಕರಣದಲ್ಲಿ ಕಳುಹಿಸಬೇಕಾದ ತಿಳುವಳಿಕೆ ಪತ್ರವನ್ನು ಆರೋಪಿಗೆ ಕಳುಹಿಸದೇ ಇರುವುದರಿಂದ, ಆರೋಪಿಗೆ ಪ್ರತ್ಯುತ್ತರ ತಿಳುವಳಿಕೆ ಪತ್ರ ನೀಡಲು ಅವಕಾಶ

ಆಗಿಲ್ಲ ಎಂದರೆ ಸರಿ. ಪ್ರಕರಣದಲ್ಲಿ ಹೇಳಿರುವಂತೆ ಆರೋಪಿ ಯಾವುದೇ ತಪ್ಪನ್ನು ಮಾಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು